ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಮುಖ್ಯಮಂತ್ರಿಗಳು ಧಾರವಾಡಕ್ಕೆ ಹೋದಾಗ, ಒಂದು ನಿಯೋಗವನ್ನು ತೆಗೆದುಕೊಂಡು ಹೋಗುತ್ತೇನೆಂದು ಹೇಳಿದ್ದರು, ನಿಯೋಗ ತೆಗೆದುಕೊಂಡು ಹೋಗುವ ವಿಚಾರ ಏನಾಯಿತು ಎನ್ನುವುದು ಅಷ್ಟೆ ನಾನು ಕೇಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿದರು ಎಂದು ನಾನು ಇದನ್ನು ಪ್ರಸ್ತಾಪ ಮಾಡುತ್ತೇನೆ. ಗೋವಾಕ್ಕೆ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ. ಕರ್ನಾಟಕ ನೀರಾವರಿ ನಿಗಮ ಸ್ಥಳಾಂತರಗೊಂಡಿದ್ದು ಅದರ ಉದ್ಘಾಟನೆಗೆ ಸಮಾರಂಭಕ್ಕೆ ಅವರು ಬಂದಿದ್ದರು. ಆಗ ಸನ್ಮಾನ್ಯ ಬೆಲ್ಲದವರು ಕೂಡ ಇದ್ದರು. ಮಾನ್ಯ ಜಗದೀಶ ಶೆಟ್ಟರವರು ತಮ್ಮ ಭಾಷಣವನ್ನು ಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಹೇಳಿದರೆಂದರೆ, ಗೋವಾ ಮುಖ್ಯಮಂತ್ರಿಗಳು ಈ ಮಹಾದಾಯಿ ಯೋಜನೆಯ ಬಗ್ಗೆ ಪಾಜಿಟೀವ್ ಆಟಿಟ್ಯೂಡ್ ಹೊಂದಿದ್ದಾರೆ, ಅವರು ಒಪ್ಪುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ, ಏಕೆ ಈ ಯೋಜನೆಯನ್ನು ತಕ್ಷಣ ತೆಗೆದುಕೊಳ್ಳಬಾರದು ಎನ್ನುವ ಬಗ್ಗೆ ಅವರು ಪ್ರಸ್ತಾಪವನ್ನು ಮಾಡಿದರು. ಅದಕ್ಕೆ ಉತ್ತರವಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ಹೇಳಿದರೆಂದರೆ, ಸರ್ಕಾರದ ಪರವಾಗಿ ನಾನು ನಿಮಗೆ ಆಥರೈಸ್ ಮಾಡುತ್ತೇನೆ. ನೀವು ಗೋವಾ ಸರ್ಕಾರದ ಜೊತೆಗೆ ಚರ್ಚೆ ಮಾಡಿ ಅವರು ಒಂದೆರಡು ಅಂಶಗಳನ್ನು ಹೇಳಿದರೆ ಅದಕ್ಕೆ ನಾವು ಒಪ್ಪಬೇಕೋ ಅಥವಾ ಬಿಡಬೇಕೋ ಎನ್ನುವ ಬಗ್ಗೆ ನಾವು ಚರ್ಚೆಯನ್ನು ಮಾಡೋಣ. ನೀವು ಹೋಗಿ ಬಂದ ಮೇಲೆ ಸಕಾರಾತ್ಮಕವಾಗಿ ಆಗುವುದಿದ್ದರೆ ಅವರು ಕೇಳಿದ್ದರ ಬಗ್ಗೆ ನಾವು ಸ್ಪಂದಿಸುವುದಕ್ಕೆ ಖಂಡಿತವಾಗಿ ಸರ್ಕಾರದ ಪರವಾಗಿ ನೀರಾವರಿ ಸಚಿವರನ್ನು ಕಳುಹಿಸಿ ಕೊಡುತ್ತೇನೆಂದು ಹೇಳಿದ್ದರು. ಈ ಒಂದು ಸಂದರ್ಭದಲ್ಲಿ ತಾವು ಪ್ರಸ್ತಾಪ ಮಾಡಿರುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ನಿಮ್ಮ ಪಕ್ಷದವರು ಆಗಿರಬಹುದು, ಆ ಒಂದು ಕಾರಣವನ್ನು ಉಪಯೋಗ ಮಾಡಿಕೊಂಡು ತಾವು ಗೋವಾ ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ಮಾಡಿ ಅವರನ್ನು ಒಪ್ಪಿಸುವುದಾದರೆ ನಮಗೆ ಬಹಳ ಸಂತೋಷವಾಗುತ್ತದೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ಸಮಯ ಮುಕ್ತಾಯಗೊಂಡಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸಿ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 27ನೇ ಮಾರ್ಚ್ 2001ರ ಒಂದನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 135 ಪ್ರಶ್ನೆಗಳ ಪೈಕಿ 115 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.